'ಹೋದಬಾರಿ ನೆನಪಿದೆಯಾ? ಆ ಮುದುಕಿಗೆ ಏನೂ ಗೊತ್ತಾಗಲೇ ಇಲ್ಲ. ನಾವು ಅವಳನ್ನು ರಸ್ತೆ ದಾಟಿಸುತ್ತಿದ್ದೇವೆಂದು ತಿಳಿದುಕೊಂಡಳು!' ಶೀಲಾ ತನ್ನ ಗೆಳತಿಯ ಮನವೊಲಿಸಲು ಪ್ರಯತ್ನಿಸಿದಳು.

'ನಡಿ, ಆಟ ಆಡೋಣ. ನಿನ್ನ ಅಪ್ಪನಿಗೆ ಇವತ್ತು ಏನೂ ಸಂಪಾದನೆ ಆಗಲೇ ಇಲ್ಲ ಅಂತ ಹೇಳು.'

'ನಿನ್ನೆ ನಾನು ಹಾಗೆಯೇ ಹೇಳಿದೆ. ಚೆನ್ನಾಗಿ ಹೊಡೆತ ಬಿತ್ತು.'

ರಾಣಿಯ ಕಣ್ಣಿನಲ್ಲಿ ಹೊಳೆಯಿತು ಒಂದು ಕಪಟ ನೋಟ. 'ಅದಿಲ್ಲದಿದ್ದರೆ ಬಸ್ ನಿಲ್ದಾಣಕ್ಕೆ ಹೋಗೋಣ ನಡಿ.'

'ಕೆಟ್ಟಪ್ರಾಣಿ! ಅವಳಿಗೆ ಗೊತ್ತಿದೆ ನನಗೆ ಬೇಡುವುದು ಇಷ್ಟ ಇಲ್ಲ ಅಂತ,' ಹಾದಿಯಲ್ಲಿದ್ದ ಹಳೆಯ ತಗಡಿನ ಡಬ್ಬವನ್ನು ಜೋರಾಗಿ ಒದೆಯುತ್ತ ಆಲೋಚಿಸಿದಳು ಶೀಲಾ. 'ಹ್ಞಂ ನನ್ನನ್ನು ಆಟ ಆಡಿಸಬೇಕೂಂತ ಇದೀಯ ಅಲ್ವಾ?'

'ರಾಣಿ, ನಾವು ಪೇಟೆಯ ಕಡೆಗೆ ಯಾಕೆ ಹೋಗಬಾರದು?' ಅವಳು ಕೇಳಿದಳು. 'ನಾನು ನಿನಗೆ ತೆಗೆಸಿ ಕೊಡಬೇಕೆಂದುಕೊಂಡಿದ್ದೆನಲ್ಲ, ಆ ಚಂದದ ಹೊಳೆಯುವ ಚಿಟ್ಟೆಯಾಕಾರದ ಕ್ಲಿಪ್. ಅದು ಅಲ್ಲಿಯೇ ಸಿಗುತ್ತದೆ.'

ಜೋರಾಗಿ ಹೆಜ್ಜೆಗಳನ್ನಿಡುತ್ತ ಅತ್ತ ಸಾಗಲು ಅವರಿಗೆ ಹೆಚ್ಚು ಹೊತ್ತು ಹಿಡಿಯಲಿಲ್ಲ. ಮಗು ರಾಣಿಯ ಕೊರಳಿಗೆ ಮಂಗನ ಮರಿಯಂತೆ ಆತುಕೊಂಡಿತ್ತು.

ಮಹಾತ್ಮ ಗಾಂಧಿ ರಸ್ತೆಯಲ್ಲಿ ಎಲ್ಲ ದಿನವೂ ಸಂತೆಯೇ. ಶೀಲಾಳ ಬೆರಳುಗಳಿಗೀಗ ಎಲ್ಲಿಲ್ಲದ ತರಾತುರಿ. ಎಲ್ಲಿ ನೋಡಿದರೂ ಕೈಚೀಲ, ದುಡ್ಡಿನ ಸಂಚಿ! ಅವೂ ಎಷ್ಟೊಂದು! ಸಾಕಾಗಿಹೋದ ಅಮ್ಮಂದಿರು, ಬಟ್ಟೆಗಳನ್ನು ಆರಿಸುತ್ತಿರುವ ಹುಡುಗಿಯರು, ಹುಡುಗಿಯರನ್ನು ಪರಿಶೀಲಿಸುತ್ತಿರುವ ಹುಡುಗರು, ವ್ಯಾಪಾರಸ್ಥರು ಹಾಗೂ ಅವರ ಚಿಕ್ಕ ಚಿಕ್ಕ ಪೆಟ್ಟಿಗೆಗಳು. ಒಂದೊಂದೂ ಸಂಭಾವ್ಯ ಬಂಗಾರದ ಗಣಿ. ರಾಣಿಯ ಕೈಯನ್ನು ಇನ್ನಷ್ಟು ಗಟ್ಟಿಯಾಗಿ ಹಿಡಿದುಕೊಂಡಳು ಶೀಲಾ. ಅವರಿಬ್ಬರೂ ಆಲಂಕಾರಿಕ ಆಭರಣಗಳ ಅಂಗಡಿಗೆ ಹೋಗಿ ಸುತ್ತಲೂ ನೋಡತೊಡಗಿದರು. ಅಷ್ಟರಲ್ಲಿ ಆರಂಭವಾದ ಮಗುವಿನ ಅರಚಾಟಕ್ಕೆ ಹುಡುಗಿಯರು ಭಯಬಿದ್ದರಲ್ಲದೇ ಅಂಗಡಿಯವನೂ ಅವರನ್ನು ಬೆದರಿಸಿ ಓಡಿಸಿ ಬಿಟ್ಟ.

'ನಿನ್ನ ತಮ್ಮನಿಂದಾಗಿ ನಮಗೆ ಏನೆಲ್ಲ ತಪ್ಪಿಹೋಯಿತು ನೋಡು! ನೀನು ಅವನನ್ನು ಮನೆಯಲ್ಲಿಯೇ ಬಿಟ್ಟುಬರಬೇಕಾಗಿತ್ತು. ಅವನು ನಮ್ಮ ಕಾಲಿನ ಸುತ್ತ ಸುತ್ತಿದ ಕಬ್ಬಿಣದ ಸರಪಳಿಯಾಗಿದ್ದಾನೆ,' ಒದರಿದಳು ಶೀಲಾ.

'ಆದರೆ ನನಗವನನ್ನು ನೋಡಿಕೊಳ್ಳಬೇಕಲ್ಲ. ಜನ ಅವನಿಂದಾಗಿಯೇ ನಮಗೆ ಹಣ ಕೊಡುತ್ತಾರೆ,' ವಾದಿಸಿದಳು ರಾಣಿ.

'ನಿನಗೆ ಕೊಡುತ್ತಾರೆ, ನನಗಲ್ಲ. ನಿನ್ನ ಜೊತೆ ಇದ್ದಾಗ ನನ್ನ ಕಡೆ ಯಾರೂ ನೋಡುವುದೂ ಇಲ್ಲ.'

'ಅವನನ್ನು ಇಡೀ ದಿನ ಹೊತ್ತುಕೊಳ್ಳುವವಳು ನಾನು!' ರಾಣಿ ತನ್ನನ್ನೇ ತಾನು ಸಮರ್ಥಿಸಿಕೊಂಡಳು. ಆದರೆ ಶೀಲಾಳಿಗೆ ಅವಳ ಮಾತನ್ನು ಆಲಿಸಲೂ ಆಗದಷ್ಟು ಸಿಟ್ಟು ಬಂದಿತ್ತು.

ಅಂದು ರಾತ್ರಿ ಅವಳಿಗೆ ನಿದ್ದೆ ಬರಲಿಲ್ಲ. ಹೊಟ್ಟೆ ಚುರುಗುಡುತ್ತಿತ್ತು, ಅಪ್ಪ ಕೊಟ್ಟ